ನನ್ನನ್ನು ತಡೆದ 'ಬಿಡು ಅದನ್ನೇನೂ ನೋಡಬೇಡ, ಅರ್ಧ ಕೆಲಸ ಅರಸನಿಗೂ ತೋರಿಸಬಾರದಂತೆ'.

'ಅದೇಕೆ? ನಾನು ನೋಡಬಾರದೆ? ಎಷ್ಟೋ ಅರ್ಧ ಚಿತ್ರಗಳನ್ನು ನೀನು ರಚಿಸುವಾಗಲೇ ನೋಡಿದ್ದೇನಲ್ಲ.'

'ಅದು, ಎಲ್ಲಾ ಚಿತ್ರಗಳಂತಲ್ಲ.'

'ಅಂದರೆ?'

'ಅದು ಊರ್ವಶಿ ಪುರೂರವರ ಕಥಾಪ್ರಸಂಗ'

'ಹಾಂ! ತಿಳಿದಿದೆ. ಪುರೂರವನಿಗಾಗಿ ಅಪ್ಸರ ಸ್ತ್ರೀ ಊರ್ವಶಿ ಭೂಮಿಗೆ ಬಂದದ್ದು, ಅವನ ಜೊತೆ ಸಂಸಾರ ನಡೆಸಿದ್ದು, ನಿಬಂಧನೆಯನ್ನು ಹಾಕಿದ್ದು ಎಲ್ಲವೂ ನನಗೆ ತಿಳಿದಿದೆ.'

'ಅದು ಸರಿ, ಆದರೆ ಪುರೂರವನನ್ನು ನಗ್ನಸ್ಥಿತಿಯಲ್ಲಿ ಕಂಡಾಗ ಸ್ವರ್ಗಕ್ಕೆ ಹಿಂತಿರುಗುವುದಾಗಿ ನಿಬಂಧನೆ ಇಟ್ಟಿದ್ದಳು ಊರ್ವಶಿ. ಒಮ್ಮೆ ದೇವಲೋಕದವರ ಪಿತೂರಿಯಿಂದ ಪುರೂರವನ ಕುರಿ ಕಳುವಾಗಿದೆಯೆಂದು ಪುಕಾರ ಎಬ್ಬಿಸಿದರು. ಅರ್ಧರಾತ್ರಿಯಲ್ಲಿ ಇಬ್ಬರೂ ನಗ್ನಾವಸ್ಥೆಯಲ್ಲಿದ್ದಾಗ ಪುರೂರವ ಗಾಬರಿಯಿಂದ ಮೇಲೆದ್ದು ಮಾಡಕ್ಕೆ ಬಂದ. ಊರ್ವಶಿಯೂ ಅರೆನಗ್ನಳಾಗಿ ಅವನನ್ನು ಹಿಂಬಾಲಿಸಿದಳು. ಆಗ ಮಿಂಚೊಂದು ಅವರಿಬ್ಬರ ಮೇಲೆ ಹಾಯಲು ಊರ್ವಶಿ ಪುರೂರವನನ್ನು ನಗ್ನವಾಗಿ ಕಂಡುಬಿಟ್ಟಳು. ಇದರಿಂದ ಅವಳು ಇದ್ದ ಸ್ಥಿತಿಯಲ್ಲೇ ಆಕಾಶದೆಡೆಗೆ ಹಾರಿದಳು. ಅಸಹಾಯಕನಾದ ಪುರೂರವರ ಅವಳ ಮೇಲ್ಹೊದಿಕೆಯನ್ನೆಳೆದು ಅವಳನ್ನು ಹಿಂದಕ್ಕೆ ಕರೆಯಲು ಯತ್ನಿಸಿದ. ತಾನು ಪುರೂರವನೊಂದಿಗೆ ಕಳೆದ ದಿನಗಳ ಸುಖದ ನೆನಪು, ಅವನನ್ನು ನಿರಂತರವಾಗಿ ಬಿಟ್ಟು ಹೋಗಬೇಕಾದ ದುಃಖ ಎಲ್ಲವೂ ಮಿಶ್ರವಾದ ಭಾವ ಊರ್ವಶಿಯ ಮುಖದಲ್ಲಿ ಕಾಣಬೇಕು. ಎಷ್ಟು ಪ್ರಯತ್ನಿಸಿದರೂ ನನಗೆ ಬರೆಯಲಾಗುತ್ತಿಲ್ಲ. ಅದಕ್ಕೆ ಅರ್ಧಕ್ಕೇ ಬಿಟ್ಟಿದ್ದೇನೆ.'

'ನಾನು ರೂಪದರ್ಶಿಯಾದರೆ?'

'ಸಾಧ್ಯವಿಲ್ಲ ಸುಗಂಧ, ಹೀಗೆ ನಗ್ನಸ್ಥಿತಿಯಲ್ಲಿ ನಿನ್ನನ್ನು ನಿಲ್ಲಿಸಲು ನನ್ನಿಂದಾಗದು.'



ರಾಜಾ ರವಿವರ್ಮ ಚಿತ್ರಿಸಿದ 'ವಿಶ್ರಾಂತಿ ಪಡೆಯುತ್ತಿರುವ ಮಹಿಳೆ'